ಶತಪ್ರಯತ್ನ ಪಟ್ಟಿದ್ದರು ಯಶೋದಮ್ಮ. ತೌರಿನ ಪೈಕಿಯ ಪಾಶ ಒಂದು ಕಡೆಯಾದರೆ ಅಣ್ಣ ಮಾಡಿಟ್ಟಿದ್ದ ಆಸ್ತಿಯ ಮೇಲೆ ಮತ್ತೊಂದು ಕಣ್ಣು. ಅಣ್ಣನಿಗೆ ಇಬ್ಬರೇ ಹೆಣ್ಣುಮಕ್ಕಳು. ಹಿರಿಯವಳು ದೀಪಾ. ಎರಡನೆಯವಳು ಈ ಮನೆಯ ಸೊಸೆ ಪಾರಿಜಾತ. ಎಲ್ಲಾ ಸರಿಯಾಗಿದ್ದಿದ್ದರೆ ಯಶೋದಮ್ಮನ ಅಣ್ಣ ತಂಗಿಯ ಮೇಲಿನ ಮೋಹಕ್ಕೆ ಕಟ್ಟು ಬಿದ್ದು ಈ ಮನೆಗೆ ಹೆಣ್ಣು ಕೊಡುತ್ತಿದ್ದರು ಅನ್ನುವುದು ಸುಳ್ಳು. ತೀರಾ ತಾವೇ ಮೇಲೆ ಬಿದ್ದು ಒತ್ತಾಯಿಸಲೂ ಆಗದೆ, ಬಾಯಿಗೆ ಕಡುಬು ತುಂಬಿಕೊಂಡಂತೆ ತೆಪ್ಪಗಿರಲೂ ಆಗದೆ ಯಶೋದಮ್ಮ ಇಬ್ಬಂದಿ ಸ್ಥಿತಿಯಲ್ಲಿರುವಾಗ ವಿಧಿ ಅವರ ಆಸೆಗೆ 'ಅಸ್ತು' ಎಂದು ಸಮ್ಮತಿಯ ಮುದ್ರೆ ಒತ್ತಿಬಿಟ್ಟಿತು. ಯಾವುದನ್ನೇ ಆಗಲಿ, ವಿಪರೀತವಾಗಿ ಅದರ ಕುರಿತು ಯೋಚಿಸುತ್ತಿದ್ದರೆ ಅದು ಸತ್ಯ ಆಗಿಬಿಡುತ್ತದೆ ಎನ್ನುವುದೊಂದು ಹೇಳಿಕೆ ಮಾತು. ಯಾರಿಗೂ ಗೊತ್ತಾಗದಂತೆ ಗುಟ್ಟಾಗಿ ಅದೆಷ್ಟೋ ಹರಕೆ ಕೂಡಾ ಕಟ್ಟಿಕೊಂಡಿದ್ದರು ಯಶೋದಮ್ಮ. ತೌರಿನ ಆಸ್ತಿ ಯಾರೋ ಮೂರನೆಯವರ ಪಾಲಾಗುವುದು ಸುತರಾಂ ಅವರಿಗೆ ಸೈಸಿಕೊಳ್ಳಲಾಗದ್ದು. ಅಣ್ಣ ಜಬರ್ದಸ್ತಾಗಿ ಹಿರಿಮಗಳು ದೀಪನ ಮದುವೆ ಮಾಡಿ ಮೀಸೆ ತಿರುಪಿಕೊಂಡನಲ್ಲ, ಆ ಸಂಭ್ರಮವೆಲ್ಲಾ ಒಂದೆರಡು ವರ್ಷ ಅನ್ನುವುದರಲ್ಲಿ ನೆಲ ಕಚ್ಚಿ ಹೋಯ್ತು. ಹೇಳಿಕೊಳ್ಳುವುದಕ್ಕೆ ಅಳಿಯ ವಿದ್ಯಾವಂತ, ಬುದ್ಧಿವಂತ. ಕಾಲೇಜಿನಲ್ಲಿ ಮೇಷ್ಟ್ರ ಕೆಲಸದ ಕಿರೀಟ. ಆದರೆ ಬುದ್ಧಿ ಯಾಕೋ ಸುಸೂತ್ರವಿಲ್ಲ. ಹುಟ್ಟುಗುಣ ಎನ್ನಬೇಕೋ, ಗರ್ವ ಎನ್ನಬೇಕೋ, ಸೊಕ್ಕು ಅನ್ನಬೇಕೋ ಅರ್ಥವಾಗದ ವಿಚಿತ್ರ. ತಾನೇನೋ ಈ ಲೋಕಕ್ಕಿಲ್ಲದವನು ಎನ್ನುವ ಹಾಗೆ ಬೀಗುತ್ತಿದ್ದವನಿಗೆ ಹಳ್ಳಿಮನೆಯಿಂದ ಬಂದ ಹೆಂಡತಿ ಕಾಲಕಸ. ಹೇಳುತ್ತಾಳಲ್ಲ ದೀಪ, ಶುರುವಿನಿಂದ ಅವನು ಹಾಗೆಯೇ. ಸೀರೆ ಉಟ್ಟಿದ್ದು ಸರಿಯಾಗಲಿಲ್ಲ, ತಲೆ ಬಾಚಿದ್ದು ಸರಿಯಾಗಲಿಲ್ಲ, ನೆಟ್ಟಗೆ ಮಾತಾಡುವುದಕ್ಕೆ ಬರುವುದಿಲ್ಲ, ಒಂದೊಂದಲ್ಲ ಕಂಪ್ಲೇಂಟು. ಕಣ್ಣು ಮೂಗಿನಿಂದ ಅವನು ಸೊಗಸಾಗಿದ್ದಿದ್ದು ಮತ್ತೊಂದು ಕೋಡು. ಮಾವ ಮಾಡಿಟ್ಟ ಆಸ್ತಿಪಾಸ್ತಿ ಏನೇ ಇರಲಿ, ಈ ಗುಗ್ಗು ತನ್ನ ಯೋಗ್ಯತೆಗೆ ಸಮವಲ್ಲ ಎನ್ನುವ ಹಾಗೆ ಅವನು ನಡೆದುಕೊಳ್ಳುತ್ತಿದ್ದರೆ ದೀಪಾ ಈ ತಾತ್ಸಾರದಿಂದ ಕುಗ್ಗಿ ಹೋಗಿದ್ದಳು. 'ಮತ್ತ್ಯಾಕೆ ನನ್ನ ಮದುವೆ ಮಾಡ್ಕಂಡ್ರಿ?' ಎಂದು ಕೇಳದೆ ಬಿಟ್ಟಿರಲಿಲ್ಲ.

'ನಮ್ಮಪ್ಪನ್ನ ಕೇಳು. ಅವನೇ ನಿನ್ನ ಮೆಚ್ಚಿ ಮದುವೆ ಮಾಡಿಸಿದ್ದು' ಅನ್ನುತ್ತಾನೆ ಭಂಡ.

'ನಿಮ್ಗೇನು ಮಕದ ಮೇಲೆ ಕಣ್ಣಿರಲಿಲ್ವಾ?"

'ಯಾರು ಇಲ್ಲ ಅಂದಿದ್ದು? ಅಲ್ವೇ, ಕಣ್ಣಲ್ಲಿ ನೋಡಿದ ಕೂಡ್ಲೆ ಇದು ಇಂತಾದ್ದೇ ಅಂತ ಅಂದಾಜು ಮಾಡೋಕೆ ಬರೋ ಹಾಗಿದ್ದಿದ್ರೆ ಎಷ್ಟೋ ಮದುವೆಗಳು ನಡೀತಾನೇ ಇರ್ಲಿಲ್ಲ...'

'ಈಗ ನಿಮಗೆ ಅರೆಯಾಗಿದ್ದೆಂತದು? ಹೊತ್ತಿಗೆ ಸರಿಯಾಗಿ ಬೇಯಿಸಿ ಹಾಕಲ್ವಾ? ಕರೆದಾಗ...'

'ಸಾಕು, ಸಾಕು...' ಎನ್ನುತ್ತಾ ಅಲ್ಲಿಂದ ಎದ್ದು ಹೋಗಿದ್ದ ಗ್ರಾಸ್ತ. ಅದೆಷ್ಟೋ ಸಂಸಾರಗಳ ಕತೆ ಇವರದ್ದೂ. 'ಬೇಕು' ಎಂದು ಒಪ್ಪಿಕೊಳ್ಳಲೂ ಆಗದ, 'ಬೇಡ' ಎಂದು ಮುರಿದುಕೊಳ್ಳಲೂ ಆಗದ ಸಂದಿಗ್ಧ. ಬಳೆ ತೊಟ್ಟುಕೊಳ್ಳುವಾಗ ಕೈ ಗಣ್ಣಿನವರೆಗೆ ಏರಿದ ಬಳೆ ಮೇಲಕ್ಕೇರಲು ಸಾಧ್ಯವಾಗದೆ ಯಮಯಾತನೆ ಕೊಟ್ಟು ಕಣ್ಣಲ್ಲಿ ದಳದಳ ನೀರಿಳಿಸಿದಂತೆ. ಬಿಚ್ಚಿ ಬಿಸಾಕಲು ಮನಸ್ಸಿಲ್ಲ. ತೊಡಲು ಕಷ್ಟ. 'ಹೊಡೀತಾನನೇ?' 'ಬಡೀತಾನನೇ?' ಅಂದರೆ ಇಲ್ಲ. 'ಮತ್ತೆ?' 'ಮತ್ತೆ...' ಮುಂದೆ ಉತ್ತರಿಸಲು ಗೊತ್ತಾಗುವುದಿಲ್ಲ. ಮಾತಿಲ್ಲದೆ ವರ್ತನೆಯಿಂದಲೇ ಮನಸ್ಸನ್ನು ಗೀರಬಲ್ಲ. ಒಂದು ದಿನ ಹೊರಗೆ ಸುತ್ತಾಡಿಸಲು ಕರೆದುಕೊಂಡು ಹೋದವನಲ್ಲ. ಒಂದು ಮೊಳ ಹೂವು ತೆಗೆಸಿಕೊಟ್ಟವನಲ್ಲ. ಅವನಿಗೆ ತನ್ನನ್ನು ಕಂಡರೆ ಇಷ್ಟವಿಲ್ಲ ಎನ್ನುವುದು ಒಂದು ವ್ಯಥೆಯಾದರೆ ತನ್ನನ್ನು ಕಂಡರೆ ಆಗುವುದೇ ಇಲ್ಲ ಎನ್ನುವುದು ಇನ್ನೊಂದು ಊಹೆಯ ಕಥೆ. ಒಟ್ಟಾರೆ ಹೀಗೇ ಎಂದು ಬೆಟ್ಟು ಮಾಡಲಾಗದಿದ್ದರೂ ಏನೋ ಸರಿಯಿಲ್ಲ ಎನ್ನುವ ಬಗ್ಗೆ ಹುಡುಗಿಗೆ ಮನದಟ್ಟಾಗಿಬಿಟ್ಟಿತ್ತು. ಅಪ್ಪನ ಮನೆಯಲ್ಲಿದ್ದಾಗ